# 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

**ಎಸ್ ಸಿ ನಂಃ 31/15**

**(ಪ್ರಾ.ಸಾ. 1 ಚಾಸಾ- 1 )**

ತಾಃ 18-12-2017 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | | |
|---|---|---|
| ಸಾಕ್ಷಿದಾರರ ಹೆಸರು | | ಸಿ ಟಿ ರಘು |
| ತಂದೆಯ ಹೆಸರು | ಃ | ಬಸವರಾಜು |
| ವಯಸ್ಸು | ಃ | 41 ವರ್ಷ |
| ಉದ್ಯೋಗ | ಃ | ಖಾಸಗಿ ಕಂಪನಿಯಲ್ಲಿ ಕೆಲಸ |
| ವಾಸ ಸ್ಥಳ | ಃ | ತುಮಕೂರು |

## ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ

ನಾನು ದಾಬಾಸ್‌ಪೇಟೆ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಟಿಡಿಪಿಎಸ್ ಕಂಪನಿಯಲ್ಲಿ ಸುಮಾರು 10 ವರ್ಷಗಳಿಂದ ಕೆಲಸ ಮಾಡುತ್ತೇನೆ. ನಾನು ತುಮಕಾರಿನಲ್ಲಿ ಬಾಡಿಗೆ ಮನೆ ಮಾಡಿಕೊಂಡಿದ್ದು ಅಲ್ಲಿಂದ ನನ್ನ ಕಂಪನಿಗೆ ಕೆಲಸಕ್ಕೆ ಬಂದು ಹೋಗುತ್ತೇನೆ.

ಚಾಸಾ 2 ಸಂತೋಷ ನನ್ನ ಜೊತೆ ನನ್ನದೇ ಕಂಪನಿಯಲ್ಲಿ ಕೆಲಸಮಾಡುತ್ತಿದ್ದು ಅವರೂ ಸಹ ತುಮಕೂರಿನಲ್ಲಿ ವಾಸ ಮಾಡಿಕೊಂಡಿದ್ದು ಅಲ್ಲಿಂದಲೇ ಕಂಪನಿ ಕೆಲಸಕ್ಕೆ ಬಂದು ಹೋಗುತ್ತಾರೆ.

12-02-2014 ರಂದು ನಮ್ಮ ಕಂಪನಿಯವರು ಸಿ ವಿ ಜಿ ಶಾಲೆಯ ಹತ್ತಿರ ರಾತ್ರಿ ಹೊತ್ತಿನಲ್ಲಿ ಕಂಪನಿ ನಾಟಕ ಕುರುಕ್ಷೇತ್ರ ಇಟ್ಟುಕೊಂಡಿದ್ದರು. ಕಂಪನಿ ಕೆಲಸ ಮಾಡುವ ಎಲ್ಲಾ ಕಾರ್ಮಿಕರು ಸದರಿ ನಾಟಕಕ್ಕೆ ಹೋಗಿದ್ದೆವು . ನಾನು ಚಾಸಾ 2 ಸಹ ಹೋಗಿದ್ದೆವು. ರಾತ್ರಿ 1-30 ಗಂಟೆಗೆ ನಮಗೆ ನಿದ್ರೆ ಬಂದಿದ್ದರಿಂದ ನಾನು ಮತ್ತು ಸಂತೋಷ ತುಮಕೂರಿಗೆ ಹೋಗಲು ಡಾಬಾಸ್‌ಪೇಟೆ ಬಸ್ ಸ್ಟಾಂಡ್‌ಗೆ ಬಂದೆವು. ಅಲ್ಲಿ ನಿಂತಿರುವಾಗ ಒಂದು ಟಾಟಾ ಮ್ಯಾಜಿಕ್ ಗಾಡಿ ಬಂತು, ಅದರಲ್ಲಿರುವವರು ತುಮಕೂರು ಎಂದು ಕೂಗುತ್ತಿದ್ದರು ಕಾರಣ ನಾನು ಮತ್ತು ಚಾಸಾ 2 ಸದರಿ ಗಾಡಿಗೆ ಹತ್ತಿಕೊಂಡೆವು. ನಾನು ಹತ್ತುವಾಗ ಡ್ರೈವರ್ ಸೇರಿ ಅದರಲ್ಲಿ ನಾಲ್ಕು ಜನ ಇದ್ದರು. ಅಲ್ಲಿಂದ ಹೊರಟು ಪಂಡಿತನಹಳ್ಳಿ ಬಳಿ ಬರುತ್ತಿರುವಾಗ ಗಾಡಿ ನಿಲ್ಲಿಸಿದರು. ಅದರಲ್ಲಿ ಇಬ್ಬರು ನನಗೆ ಹಲ್ಲೆ ಮಾಡಿದರು. ನಂತರ ಚಾಕು ತೋರಿಸಿ ನನ್ನ ಬಳಿ ಇದ್ದ ಹಣ ಮೊಬೈಲ್ ಕೊಡುವಂತೆ ಕೇಳಿದರು. ಕಾರಣ ನನ್ನ ಬಳಿ ಇದ್ದ 5 ಸಾವಿರ ರೂಪಾಯಿ ನಗದು, ವಾಚ್ , ಮೊಬೈಲ್ ಕಿತ್ತುಕೊಂಡರು. ಅದೇ ರೀತಿ ನನ್ನ ಬಳಿ ಇದ್ದ ಎಸ್ ಬಿ ಎಂ ಮತ್ತು ಬ್ಯಾಂಕ್ ಆಫ್ ಬರೋಡಾದ ಎರಡು ಎ ಟಿ ಎಂ ಕಾರ್ಡ್‌ಗಳನ್ನು ಕಿತ್ತುಕೊಂಡರು.

ಅದೇ ರೀತಿ ಚಾಸಾ 2 ಸಂತೋಷ ಬಳಿ ಇದ್ದ ನಗದು ಹಣ ಮತ್ತು ಮೊಬೈಲ್‌ನ್ನು ಆರೋಪಿಗಳು ಹೆದರಿಸಿ ಕಿತ್ತುಕೊಂಡರು. ನಂತರ ಪುನಃ ನಮ್ಮನ್ನು ದಾಬಾಸ್‌ಪೇಟೆಗೆ ಅದೇ ವಾಹನದಲ್ಲಿ ಕರೆದು ಕೊಂಡು ಹೋದರು. ಮೊದಲು

ಹೆಚ್ ಡಿ ಎಫ್ ಸಿ ಎ ಟಿ ಎಂ ಗೆ ಕರೆದುಕೊಂಡು ಹೋದರು. ಅಲ್ಲಿ ಆರೋಪಿಗಳು ನನಗೆ ಹೆದರಿಸಿ ಬಲವಂತದಿಂದ ನನ್ನ ಎ ಟಿ ಎಂ ಕಾರ್ಡ್ ನಂಬರ್ ತೆಗೆದುಕೊಂಡು ಹೋಗಿ ಎಟಿಎಂನಲ್ಲಿ ಹಣ ಡ್ರಾ ಮಾಡಲು ನೋಡಿದರು ಹಣ ಬರಲಿಲ್ಲ, ಕಾರಣ ವಾಪಾಸು ಬಂದು ಗಾಡಿಯಿಂದ ನನ್ನನ್ನು ಬಲಾತ್ಕಾರದಿಂದ ಕರೆದುಕೊಂಡು ಹೋಗಿ ಹಣ ಡ್ರಾ ಮಾಡುವಂತೆ ಹೇಳಿದರು ಆ ಪ್ರಕಾರ ಮೂರು ಬಾರಿ ತಲಾ 7 ಸಾವಿರ, 10 ಸಾವಿರ ಮತ್ತು 5 ಸಾವಿರ ಹಣವನ್ನು ಬಲತ್ಕಾರದಿಂದ ನನ್ನಿಂದ ತೆಗೆದುಕೊಂಡರು. ಎ ಟಿ ಎಂಗೆ ನನ್ನ ಜೊತೆಗೆ ಗಾಡಿಯಲ್ಲಿದ್ದ ಇಬ್ಬರು ಬಂದಿದ್ದರು ಉಳಿದ ಮೂವರು ಹೊರಗಡೆ ನಿಂತಿದ್ದರು.

ನಂತರ ಆರೋಪಿಗಳು ನಮ್ಮಿಬ್ಬರನ್ನು ಅದೇ ಗಾಡಿಯಲ್ಲಿ ದಾಬಾಸ್‌ಪೇಟೆಯಿಂದ ಚಂದನ ಹೊಸಹಳ್ಳಿ ಹತ್ತಿರ ಕರೆದುಕೊಂಡು ಹೋಗಿ ಅಲ್ಲಿ ನಮ್ಮಿಬ್ಬರನ್ನು ಗಾಡಿಯಿಂದ ಹೊರಗೆ ನೂಕಿ ಪೋಲೀಸರಿಗೆ ಹೇಳಿದರೆ ನಮ್ಮನ್ನು ಸಾಯಿಸುತ್ತೇವೆ ಎಂದು ಬೆದರಿಕೆ ಹಾಕಿ ಹೋದರು.

ನಮಗೆ ಗಾಬರಿಯಾಗಿ ಏನು ಮಾಡಬೇಕೆಂದು ಗೊತ್ತಾಗಲಿಲ್ಲ. ನಂತರ ದಾಬಾಸ್‌ಪೇಟೆ ಪೋಲೀಸ್ ಠಾಣೆಗೆ ಹೋದೆವು ಆಗ ಬೆಳಗ್ಗೆ ಸುಮಾರು 4.30 ಗಂಟೆಯಾಗಿತ್ತು. ನನ್ನ ಹಸ್ತಾಕ್ಷರದಲ್ಲಿ ದೂರು ಬರೆದು ಪೋಲೀಸರಿಗೆ ಕೊಟ್ಟಿರುತ್ತೇನೆ. ಸಾಕ್ಷಿ ದೂರನ್ನು ನೋಡಿ ಅದರಲ್ಲಿ ತಮ್ಮ ಸಹಿಯನ್ನು ಗುರುತಿಸುತ್ತಾರೆ. ಕಾರಣ ಸದರಿ ದೂರನ್ನು ನಿಪಿ 1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು.

ನಂತರ ಪೋಲೀಸರು ನಮ್ಮನ್ನು ಪೋಲೀಸ್ ವಾಹನದಲ್ಲಿ ತುಮಕೂರು ಗೇಟ್‌ಗೆ ಕರೆದುಕೊಂಡು ಹೋಗುತ್ತಿದ್ದಾಗ ಅಲ್ಲಿ ಒಂದು ಅಂಬುಲೆನ್ಸ್ ನಿಂತಿತ್ತು. ಅಲ್ಲಿ ಒಬ್ಬ ಲಾರಿ ಡ್ರೈವರ್‌ಗೆ ಮಾರಣಾಂತಿಕ ಹಲ್ಲೆ ಮಾಡಿದ್ದರು ಎಂದು ಮತ್ತು ಅಲ್ಲಿಯೇ ನಿಂತಿದ್ದ ಒಂದು ಲೈರಿಯ ಟೈರನ್ನು ಬಿಚ್ಚಿಕೊಂಡು ಹೋಗಿದ್ದಾರೆ ಎಂದು ಗೊತ್ತಾಯಿತು. ಸದರಿ ಲಾರಿ ಡ್ರೈವರ್‌ನ್ನು ಆಂಬ್ಯುಲೆನ್ಸ್‌ಗೆ ಕರೆದುಕೊಂಡು ಹೋದರು.

ನಂತರ ದಾಬಾಸ್‌ಪೇಟೆ ಪೋಲೀಸರು ನಮ್ಮನ್ನು ಆರೋಪಿಗಳು ವಾಹನಕ್ಕೆ ಹತ್ತಿಸಿಕೊಂಡ ಸ್ಥಳದಲ್ಲಿ ಒಂದು ಮಹಜರ್ ಮಾಡಿರುತ್ತಾರೆ. ನಾನು ಸ್ಥಳ ತೋರಿಸಿರುತ್ತೇನೆ. ಮಹಜರಿಗೆ ನಾನು ಸಹಿ ಮಾಡಿರುತ್ತೇನೆ.

ಸಾಕ್ಷಿಗೆ ಮಹಜರನ್ನು ತೋರಿಸಿದ್ದು ಸಾಕ್ಷಿ ಮಹಜರಿನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಕಾರಣ ದಿನಾಂಕ 13-02-2014 ರ ಮಹಜರನ್ನು ನಿಪಿ 2 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯಿತು.

ಅದಾದ ನಂತರ ಪೋಲೀಸರು ಆರೋಪಿಗಳು ನನ್ನಿಂದ ಹಣ ಡ್ರಾ ಮಾಡಿಸಿಕೊಂಡ ಹೆಚ್ ಡಿ ಎಫ್ ಸಿ ಎ ಟಿ ಎಂ ಬಳಿ ಕರೆದುಕೊಂಡು ಹೋಗಿ ಅಲ್ಲಿ ಇನ್ನೊಂದು ಮಹಜರ್‌ನ್ನು ಮಾಡಿರುತ್ತಾರೆ. ಸದರಿ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ.

ಸಾಕ್ಷಿಗೆ ಮಹಜರನ್ನು ತೋರಿಸಿದ್ದು ಸಾಕ್ಷಿ ಮಹಜರಿನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಮಹಜರನ್ನು ನಿಪಿ 3 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ 3(ಎ) ಎಂದು ಗುರುತಿಸಲಾಯಿತು.

ನಂತರ ಪಂಡಿತನಹಳ್ಳಿ ಬಳಿ ನನ್ನಿಂದ ಮತ್ತು ಚಾಸಾ 2 ರವರಿಂದ ಬಲಾತ್ಕಾರವಾಗಿ ಹಣ, ಮೊಬೈಲ್ ಎ ಟಿ ಎಂ ಕಾರ್ಡ್‌ನ್ನು ಆರೋಪಿಗಳು ಕಿತ್ತುಕೊಂಡ ಸ್ಥಳವನ್ನು ನಾನು ಪೋಲೀಸರಿಗೆ ತೋರಿಸಿದ್ದು ಸದರಿ ಸ್ಥಳದಲ್ಲಿ ಪೋಲೀಸರು ಮಹಜರನ್ನು ಮಾಡಿರುತ್ತಾರೆ. ಸದರಿ ಮಹಜರನ್ನು ತೋರಿಸಿದ್ದು ಸಾಕ್ಷಿ ಮಹಜರಿನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಮಹಜರನ್ನು ನಿಪಿ 4 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ 4(ಎ) ಎಂದು ಗುರುತಿಸಲಾಯಿತು.

ಪಂಡಿತನ ಹಳ್ಳಿ ಬಳಿ ಹೋದಾಗ ಸದರಿ ಟಾಟಾ ಏ ಸಿ ಗಾಡಿಯಲ್ಲಿ ನಾಲ್ಕು ಜನ ಇದ್ದರು. ಇನ್ನುಳಿದ ಇಬ್ಬರು ಬಜಾಜ್ ಸ್ಕೂಟರ್‌ನಲ್ಲಿ ಅಲ್ಲಿಗೆ ಬಂದರು.

ಈ ಘಟನೆಯಾದ 15 ದಿನಗಳ ನಂತರ ದೊಡ್ಡಬೆಳವಂಗಲ ಪೋಲೀಸರು ನನ್ನನ್ನು ಠಾಣೆಗೆ ಕರೆಸಿದ್ದರು. ಅಲ್ಲಿ ಒಟ್ಟು ಐದು ಜನರನ್ನು ಪೋಲೀಸರು ನಮಗೆ ತೋರಿಸಿದ್ದು ಅವರಲ್ಲಿ ಮೂರು ಜನ ನಮ್ಮನ್ನು ಗಾಡಿಯಲ್ಲಿ ಹತ್ತಿಸಿಕೊಂಡ ಆರೋಪಿಗಳಾಗಿರುತ್ತಾರೆ. ಅವರನ್ನು ನೋಡಿ ಗುರುತಿಸಿ ಅವರೇ ನನ್ನನ್ನು ಮತ್ತು ಚಾಸಾ 2 ರವರನ್ನು ಬಲಾತ್ಕಾರವಾಗಿ ಕರೆದುಕೊಂಡು ಹೋಗಿ ಹಣ , ಮೊಬೈಲ್

ಹಾಗೂ ಎ ಟಿ ಎಂ ಕಾರ್ಡ್‌ನ್ನು ತೆಗೆದುಕೊಂಡು ಹೋಗಿ ಮತ್ತು ಎಟಿಎಂ ನಲ್ಲಿ ಹಣ ಡ್ರಾ ಮಾಡಿರುತ್ತಾರೆ ಎಂದು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ.

ನ್ಯಾಯಾಲಯದ ಮುಂದೆ ಇರುವ ಆರೋಪಿಗಳು ನನ್ನನ್ನು ಬಲಾತ್ಕಾರವಾಗಿ ಕರೆದುಕೊಂಡು ಹೋಗಿ ನನ್ನ ಬಳಿ ಇದ್ದ ಹಣ , ಮೊಬೈಲ್ ಹಾಗೂ ಎ ಟಿ ಎಂ ಕಾರ್ಡ್‌ನ್ನು ತೆಗೆದುಕೊಂಡು ಹೋದ ಆರೋಪಿತರನ್ನು ನೋಡುತ್ತಿದ್ದು ಗುರುತಿಸುತ್ತೇನೆ. (ಆರೋಪಿಗಳ ಹೆಸರು ಕೇಳಲಾಗಿ ಅವರ ಹೆಸರು ಕೃಷ್ಣ , ಚಂದ್ರಶೇಖರ್ ಹಾಗೂ ರಾಜೇಶ ಎಂದು ಹೇಳುತ್ತಾರೆ). ಉಳಿದ ಇಬ್ಬರು ಮುಖ ಪರಿಚಯ ನನಗೆ ಈಗ ಗೊತ್ತಾಗುತ್ತಿಲ್ಲ (ಅವರು ಹೆಸರು ಕೇಳಲಾಗಿ ಚಂದು ರಾಥೋಡ್ ಮತ್ತು ರಾಜಾ ಎಂದು ಹೇಳುತ್ತಾರೆ).

ನಂತರ ಮಾರ್ಚ್ ತಿಂಗಳಲ್ಲಿ ನೆಲಮಂಗಲ ಪೋಲೀಸರು ನನ್ನನ್ನು ಠಾಣೆಗೆ ಕರೆಸಿದ್ದರು. ಅಲ್ಲಿ ನನಗೆ ಪೋಲೀಸರು ಐದು ಜನ ಆಸಾಮಿಗಳನ್ನು ತೋರಿಸಿದ್ದರು. ನಾನು ಅವರಲ್ಲಿ ಮೂರು ಜನರನ್ನು ನೋಡಿ ಗುರುತಿಸಿರುತ್ತೇನೆ. ಸದರಿ ಆಸಾಮಿಗಳನ್ನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದು ಗುರುತಿಸುತ್ತೇನೆ. (ಆರೋಪಿಗಳ ಹೆಸರು ಕೇಳಲಾಗಿ ಅವರ ಹೆಸರು ಕೃಷ್ಣ , ಚಂದ್ರಶೇಖರ್ ಹಾಗೂ ರಾಜೇಶ ಎಂದು ಹೇಳುತ್ತಾರೆ). ಅಲ್ಲಿ ವಾಚ್ ಮೊಬೈಲ್ ತೋರಿಸಿದ್ದರು. ಅದು ನನ್ನದಲ್ಲ ಎಂದು ಹೇಳಿದ್ದೆ.

'ನಂತರ ಸಾಕ್ಷಿಗೆ ಒಂದು ವಾಚನ್ನು ತೋರಿಸಿದ್ದು ಸಾಕ್ಷಿ ಅದು ತನ್ನ ವಾಚು ಎಂದು ಹೇಳುತ್ತಾರೆ. ಅದನ್ನು ಮು ಮಾ 1 ಎಂದು ಗುರುತಿಸಲಾಯಿತು.

ಸದರಿ ಟೈಟಾನ್ ವಾಚನ್ನು ಪೋಲೀಸರು ನೆಲಮಂಗಲ ಪೊಲೀಸ್ ಠಾಣೆಯಲ್ಲಿ ತೋರಿಸಿದ್ದರು ನಾನು ಅದನ್ನು ಗುರುತಿಸಿದ್ದೆ.

ಪೋಲೀಸರು ನನ್ನ ಹೇಳಿಕೆ ಮಾಡುವಾಗ ಈ ಮೇಲೆ ನಾನು ಗುರುತಿಸಿದ ಮೂವರು ನನ್ನಿಂದ ಹಣ ಕಿತ್ತುಕ್ಕೊಂಡಿದ್ದರು, ಈ ಬಗ್ಗೆ ನಾನು ಅಲ್ಲಿ ಹೇಳಿಲ್ಲ. ನಾನು ಗುರುತಿಸಿದ ಮೂವರು ಆರೋಪಿಗಳು ನನ್ನಿಂದ ಎ ಟಿ ಎಂನಿಂದ ಕಿತ್ತುಕೊಂಡಾಗ ಅಲ್ಲಿಗೆ ಬಜಾಜ್ ಸ್ಕೂಟರ್‌ನಲ್ಲಿ ಬಂದ ಇಬ್ಬರಿಗೆ ಎಷ್ಟು ಹಣ ತೆಗೆದುಕೊಂಡಿದ್ದೇವೆ ಎಂದು ಹೇಳಬೇಡ ಎಂದು ನನಗೆ ಹೆದರಿಸಿದರು. ಸದರಿ ಇಬ್ಬರು ವ್ಯಕ್ತಿಗಳು ನನ್ನನ್ನು ಭೇಟಿಯಾಗಿಲ್ಲ.

ಆರೋಪಿ ಕೃಷ್ಣ ನಾನು ಓಡಿ ಹೋಗಲು ಪ್ರಯತ್ನ ಪಟ್ಟರೆ ನನ್ನ ಸ್ನೇಹಿತನಾದ ಚಾಸಾ 2 ರವರಿಗೆ ಚಾಕುವಿನಿಂದ ಚುಚ್ಚುತ್ತೇವೆ ಎಂದು ನನಗೆ ಬೆದರಿಸಿ ನನ್ನನ್ನು ಎ ಟಿ ಎಂ ಒಳಗಡೆ ಕರೆದುಕೊಂಡು ಹೋಗಿ ಹಣ ಕಿತ್ತುಕೊಂಡ. ಸಾಕ್ಷಿಗೆ ಎರಡು ಭಾವ ಚಿತ್ರ ತೋರಿಸಿದ್ದು ಅವುಗಳಲ್ಲಿ ಕಾಣಿಸಿದ್ದು ನ್ಯಾಯಾಲಯದ ಮುಂದಿರುವ ಆರೋಪಿ ಕೃಷ್ಣ ಮತ್ತು ಇನ್ನೊಬ್ಬ ಆರೋಪಿಯಾಗಿರುತ್ತಾರರೆ. ಅವರುಗಳು ಮೊದಲನೇ ಬಾರಿ ಎ ಟಿಎಂ ಗೆ ಹೋಗಿ ಹಣ ಡ್ರಾ ಮಾಡಲು ಪ್ರಯತ್ನಿಸಿದ್ದರು. ಸದರಿ ಭಾವ ಚಿತ್ರಗಳನ್ನು ನೋಡುತ್ತಿದ್ದು ಗುರುತಿಸುತ್ತೇನೆ. ಅವುಗಳನ್ನು ನಿಪಿ 5 ಮತ್ತು 6 ಎಂದು ಗುರುತಿಸಲಾಯಿತು.

**( ಈ ಹಂತದಲ್ಲಿ ಸಾಕ್ಷಿಯನ್ನು ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರವರಿಂದಃ**

ನ್ಯಾಯಾಲಯದ ಮುಂದೆ ಇರುವ ಉಳಿದ ಇಬ್ಬರು ಆರೋಪಿತರು ಚಂದು ರಾಥೋಡ್ ಮತ್ತು ರಾಜ ಎನ್ನುವವರಾಗಿದ್ದು ಅವರೂ ಸಹ ಉಳಿದ ನಾಲ್ಕು ಜನ ಆರೋಪಿಗಳೊಂದಿಗೆ ಸೇರಿಕೊಂಡು ನನ್ನನ್ನು ದೋಚಿರುತ್ತಾರೆ ಎಂದರೆ ಸಾಕ್ಷಿಯು ನಾಲ್ಕು ಜನ ನಮ್ಮನ್ನು ಟಾಟಾ ಮ್ಯಾಜಿಕ್‌ನಲ್ಲಿ ಕರೆದುಕೊಂಡು ಹೋಗುತ್ತಿರುವಾಗ ಅದರಲ್ಲಿದ್ದ ನಾಲ್ಕು ಜನ ಮೊಬೈಲ್ ಭೋನ್‌ನಲ್ಲಿ ಉಳಿದವರನ್ನು ಸಂಪರ್ಕಿಸಿ ಅವರೊಂದಿಗೆ ಮಾತನಾಡುತ್ತಿದ್ದರು. ನಾವು ದಾಬಾಸ್‌ಪೇಟೆ ಬ್ರಿಡ್ಜ್ ಕೆಳಗೆ ಇದ್ದೇವೆ. ನೀವು ಎಲ್ಲಿದ್ದೀರಿ ಎಂದು ಮಾತನಾಡುತ್ತಿದ್ದರು.

ನಾನು ಪೋಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ ಬಜಾಜ್ ಸ್ಕೂಟರ್‌ನಲ್ಲಿ ಬಂದ ಆರೋಪಿಗಳಿಬ್ಬರು ನಾಲ್ಲು ಜನರೊಂದಿಗೆ ಸೇರಿ ನನ್ನ ಹಾಗೂ ಚಾಸಾ 2 ರವರ ಬಳಿ ಇದ್ದ ಹಣ , ಮೊಬೈಲ್ ಹಾಗೂ ಎ ಟಿ ಎಂ ಕಾರ್ಡ್‌ನ್ನು ದೋಚಿದ್ದಾರೆ ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು

ಪೋಲೀಸರ ಮುಂದೆ ಈಗ ಓದಿ ಹೇಳಿದಂತೆ “ ಇಬ್ಬರು ಬಜಾಜ್ ಸ್ಕೂಟರ್‌ನಲ್ಲಿ ಅಲ್ಲಿಗೆ ಬಂದರು. ಆಗ ಎಲ್ಲರೂ ಸೇರಿಕೊಂಡು ತಮ್ಮ ಬಳಿ ಇದ್ದ ಚಾಕುವನ್ನು ನಮಗೆ ತೋರಿಸಿ ನನ್ನ ಜೇಬಿನಲ್ಲಿದ್ದ 5 ಸಾವಿರ ರೂಪಾಯಿ , ಒಂದು ವಾಚು ಹಾಗೂ ಮೊಬೈಲ್ ಪೋನನ್ನು ಕಿತ್ತುಕೊಂಡರ” ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ತಾನು ಹೇಳಿಕೆ ನೀಡಿರುವುದಿಲ್ಲ ಎನ್ನುವ ಭಾಗವನ್ನು ನಿಪಿ 7 ಎಂದು ಗುರುತಿಸಲಾಯಿತು. ಸಾಕ್ಷಿ ನಾನು ನಾಲ್ಕು ಜನ ಆರೋಪಿಗಳ ಬಗ್ಗೆ ಮಾತ್ರ ಹೇಳಿದ್ದೆ ಎನ್ನುತ್ತಾರೆ.

ನಾನು ದೊಡ್ಡಬೆಳವಂಗಲ ಪೋಲೀಸ್ ಠಾಣೆಯಲ್ಲಿ ನ್ಯಾಯಾಲಯದ ಮುಂದೆ ನಾನು ಗುರುತಿಸಿರುವ ಕೃಷ್ಣ , ಶಂಕರ್ , ರಾಜೇಶ್‌ರವರ ಜೊತೆ ಇನ್ನಿಬ್ಬರು ಆರೋಪಿಗಳಾದ ನವೀನ್ ಕುಮಾರ್ ಮತ್ತು ಚಂದು ರಾಥೋಡ್‌ರನ್ನು ನೋಡಿ ಗುರುತಿಸಿದ್ದೆ ಎಂದರೆ ಸರಿ.

ಅದೇ ರೀತಿ ಪುನಃ ನೆಲಮಗಲ ಪೋಲೀಸ್ ಠಾಣೆಯಲ್ಲಿ ನನ್ನನ್ನು ಕರೆಸಿದಾಗ ಮೇಲೆ ಹೇಳಿದ ಐದು ಜನರನ್ನು ನನಗೆ ತೋರಿಸಿದ್ದು ಅವರನ್ನು ನಾನು ನೋಡಿ ಗುರುತಿಸಿ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿ. ನಾನು ಈ ಹಿಂದೆ ಗುರುತಿಸಿದ್ದ ನ್ಯಾಯಾಲಯದ ಮುಂದಿರುವ ಆರೋಪಿಗಳ ಜೊತೆಗೆ ನ್ಯಾಯಾಲಯದ ಮುಂದಿರುವ ರಾಜ ಈತನೂ ಸಹ ಅವರೊಂದಿಗೆ ಸೇರಿ ದರೋಡೆ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಸ್ವತಃ ಅವರೆಲಲರೂ ರಾಜ ರಾಜ

ಎಂದು ಮಾತಾಡಿಕೊಳ್ಳುತ್ತಿದ್ದರು ಎಂದು ಹೇಳುತ್ತಾರೆ. ಆರೋಪಿಗಳೆಲ್ಲರೂ ನನಗೆ ಜೀವ ಬೆದರಿಕೆ ಹಾಕಿದ್ದರು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ ಃ**

ಆರೋಪಿತರ ಪರ ಹಾಜರಿರುವ ಶ್ರೀ ಎನ್ ಕೆ ವಕೀಲರು ಅವರ ಸಹ ವಕೀಲರು ಮಗುವಿಗೆ ಅನಾರೋಗ್ಯ ಇರುವ ಕಾರಣ ಈ ದಿನ ಗೆಏರು ಹಾಜರಿದ್ದು ಪಾಟೀ ಸವಾಲಿಗೆ ಸಮಯ ಬೇಕೆಂದು ಕೇಳುತ್ತಾರೆ ನ್ಯಾಯತಾ ದೃಷ್ಟಿಯಿಂದ ರೂ.1000 ರೂಪಾಯಿ ಖರ್ಚು ನೀಡುವ ಶರತ್ತಿನ ಮೇರೆಗೆ ಪಾಟೀ ಸವಾಲಿಗೆ ಮುಂದೂಡಲಾಗಿದೆ.

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}

ಓ ಹೇ ಸಾ ಸ ಸಹಿ ಮಾಡಿದ್ದಾರೆ.

1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

ತಾಃ 29-12-2017 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲು 1, 4 ರಿಂದ 6 ನೇ ಆರೋಪಿತರ ಪರವಾಗಿ ಶ್ರೀ ಎನ್ ಡಿ ವಕೀಲರಿಂದ ಃ**

ನಾನು ಹೇಳಿದಂತೆ ದಿನಾಂಕ 12-02-2014 ರಂದು ರಾತ್ರಿ ಯಾವುದೇ ನಾಟಕ ನೋಡಲು ಹೋಗಿರಲಿಲ್ಲ ಎಂದರೆ ಸರಿಯಲ್ಲ. ದಾಬಾಸ್‌ಪೇಟೆಯಿಂದ ನೆಲಮಂಗಲಕ್ಕೆ ಹೋಗುವ ರಸ್ತೆಯಲ್ಲಿ ರಾತ್ರಿ ಸಮಯದಲ್ಲಿ ವಾಹನಗಳು ಓಡಾಡುತ್ತಿರುತ್ತವೆ. ಸಾಮಾನ್ಯವಾಗಿ ಸದರಿ ರಸ್ತೆಯಲ್ಲಿ ಪ್ರಯಾಣಿಕರು ಮನವಿ ಮಾಡಿಕೊಂಡರೆ ಮಾತ್ರ ವಾಹನ ನಿಲ್ಲಿಸುತ್ತಾರೆ ಇಲ್ಲದಿದ್ದರೆ ನಿಲ್ಲಿಸುವುದಿಲ್ಲ ಎಂದರೆ ಸರಿಯಲ್ಲ.

ನಾನು ನನ್ನ ದೂರಿನಲ್ಲಿ ಟಾಟಾ ಏಸಿ ಗಾಡಿ ಹಾಗೂ ಆರೋಪಿಗಳ ಚಹರೆಯ ಬಗ್ಗೆ ವಿವರವನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ.

ನಾನು ಪೋಲೀಸ್ ಠಾಣೆಗೆ ಹಲವಾರು ಬಾರಿ ಕರೆದಾಗೆಲ್ಲಾ ಹೋಗಿದ್ದೆ ಆದೆ ಎಷ್ಟು ಬಾರಿ ಎಂದು ನೆನಪಿಲ್ಲ. ಈ ಕೇಸಲ್ಲದೇ ಬೇರೆ ಕೇಸಿನಲ್ಲೂ ಸಹ ಪೋಲೀಸರು ಠಾಣೆಗೆ ನನ್ನನ್ನು ಕರೆಸಿದ್ದರು ಎಂದರೆ ಸರಿ. ಪೋಲೀಸರು ಠಾಣೆಗೆ ಬರುವಂತೆ ಹೇಳಿ ಪೋಲೀಸರು ನನಗೆ ಸುಮಾರು 5 ಬಾರಿ ಲಿಖಿತ ನೋಟೀಸು ಕೊಟ್ಟಿದ್ದರು. ಯಾವ್ಯಾವ ದಿನಾಂಕದಂದು ಪೋಲೀಸ್ ಠಾಣೆಗೆ ಹೋಗಿದ್ದೀರಿ ಎಂದರೆ ಸಾಕ್ಷಿಯು ದಿನಾಂಕ ನನಗೆ ಸರಿಯಾಗಿ ನೆನಪಿಲ್ಲ ಆದರೆ ಕೊನೆಯ ಬಾರಿ

ದಿನಾಂಕ 15-07-14 ರಂದು ಹೋಗಿದ್ದೆ ಎನ್ನುತ್ತಾರೆ. ನನ್ನ ದೂರಿನಲ್ಲಿ ಆರು ಜನ ಆರೋಪಿಗಳು ಇದ್ದರು ಎಂದು ಎಲ್ಲೂ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ.

ನನಗೆ ಮೊದಲನೇ ಬಾರಿ ಆರೋಪಿಗಳ ಹೆಸರು ಪೋಲೀಸ್ ಠಾಣೆಗೆ ಹೋದಾಗ ಗೊತ್ತಾಯಿತು ಎಂದರೆ ಸಾಕ್ಷಿಯು ಅವರಲ್ಲಿ ಕೆಲವರ ಹೆಸರು ಗಾಡಿಯಲ್ಲಿ ಹೋಗುವಾಗಲೇ ಗೊತ್ತಾಯಿತು ಎಂದು ಹೇಳುತ್ತಾರೆ. ಸದರಿ ಆರೋಪಿಗಳ ಹೆಸರಿನ ಬಗ್ಗೆ ನನ್ನ ದೂರಿನಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ.

ಮು ಮಾ 1 ವಾಚು ಮತ್ತು ನೋಕಿಯಾ ಮೊಬೈಲ್ ನನಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ಸದರಿ ನೋಕಿಯಾ ಮೊಬೈಲ್ ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಹೇಳಿದಂತೆ ಆರೋಪಿಗಳು ನನಗೆ ಸಂಬಂಧಿಸಿದ ನಗದು ಹಣ , ಮೊಬೈಲ್ ಹಾಗೂ ಎಟಿಎಂ ಕಾರ್ಡ್‌ಗಳನ್ನು ದರೋಡೆ ಮಾಡಿರಲಿಲ್ಲ ಎಂದರೆ ಸರಿಯಲ್ಲ.

ಪೋಲೀಸರನ್ನು ಯಾವ ದಿನಾಂಕದಂದು ಘಟನಾ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದೆ ಎಂದು ನೆನಪಿಲ್ಲ. ಅದೇ ರೀತಿ ದಾಬಾಸ್‌ಪೇಟೆಯ ಹೆಚ್ ಡಿ ಎಫ್ ಸಿ ಎ ಟಿ ಎಂ ಬಳಿ ಯಾವ ದಿನಾಂಕದಂದು ಪೋಲೀಸರು ಬಂದಿದ್ದರು ಎಂದು ನನಗೆ ನೆನಪಿಲ್ಲ. ಘಟನಾ ಸ್ಥಳಕ್ಕೆ ಹೋದಾಗ ನನ್ನ ಜೊತೆ ನನ್ನ ಸ್ನೇಹಿತ ರಘು ಎನ್ನುವವರೂ ಸಹ ಇದ್ದು ಮಹಜರಿಗೆ ಸಹಿ ಮಾಡಿದ್ದಾರೆ. ನಾನು ಹೇಳುವಂತೆ ರಘು ಎನ್ನುವವರು ಬಂದಿರಲಿಲ್ಲ ಎಂದರೆ ಸರಿಯಲ್ಲ. ನಿಪಿ 2 ಸ್ಥಳ ಮಹಜರಿಗೆ ನಾನು ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ.

ಪೋಲೀಸ್ ಠಾಣೆಯಲ್ಲಿ ಎಷ್ಟು ಸಹಿ ಮಾಡಿದ್ದೇನೆ ಎಂದರೆ ಸಾಕ್ಷಿಯು ಎಷ್ಟು ಸಹಿ ಮಾಡಿದ್ದೀರಿ ಎಂದರೆ ಸಾಕ್ಷಿಯು ತನಗೆ ನೆನಪಿಲ್ಲ ಎನ್ನುತ್ತಾರೆ. ಸಾಕ್ಷಿ ಸ್ವತಃ ಪೋಲೀಸರು ಹೇಳಿದ ದಾಖಲೆಗೆ ಸಹಿ ಮಾಡಿದ್ದೇನೆ. ಅದರೆ ಅದನ್ನು ಓದಿ ನಂತರ ನಾನು ಅದಕ್ಕ ಸಹಿ ಮಾಡಿದ್ದೇನೆ ಎನ್ನುತ್ತಾರೆ.

ಘಟನೆಯ ಸಂಬಂಧ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಪೋಲೀಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 2 ಸಂತೋಷ ನನ್ನ ಸ್ನೇಹಿತ ಎಂದರೆ ಸರಿ. ಅವರಿಗೆ ಸಹಾಯ ಮೂಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಘಟನೆಯಾದ ನಂತರ ಪೋಲೀಸರು ನನಗೆ ಟಾಟಾ ಏಸಿ ಗಾಡಿ ತೋರಿಸಿರಲಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನಾನು ನ್ಯಾಯಾಲಯದಲ್ಲಿ ಪ್ರಥಮ ಬಾರಿಗೆ ನೋಡಿದ್ದೆ ಮೊದಲು ನೋಡಿರಲಿಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 2ನೇ ಆರೋಪಿ ಪರ ಶ್ರೀಮತಿ ಬಿ ಜೆ ಎಸ್ ವಕೀಲರಿಂದಃ</u>**

ನಾನು ಪೋಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ ಫ್ಯಾಕ್ಟರಿಯಲ್ಲಿ ಆರು ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ ಎಂದು ಹೇಳಿದ್ದೆ ಎಂದರೆ ಸರಿ. ನಮ್ಮ ಫ್ಯಾಕ್ಟರಿಯಲ್ಲಿ ಸುಮಾರು 1000 ಜನ ಕೆಲಸ ಮಾಡುತ್ತಾರೆ. ನಮ್ಮ ಫ್ಯಾಕ್ಟರಿಯಲ್ಲಿ

ಕೆಲಸ ಮಾಡುವ ನೌಕರ ವರ್ಗದವರಿಗೆ ಬಸ್ ವ್ಯವಸ್ಥೆ ಇದೆ ಎಂದರೆ ಸರಿ. ಫ್ಯಾಕ್ಟರಿಯಲ್ಲಿ ಕ್ಯಾಂಟೀನ್ ವ್ಯವಸ್ಥೆ ಇದೆ. ಆದ ಕಾರಣ ಫ್ಯಾಕ್ಟರಿ ಕೆಲಸಕ್ಕೆ ಹೋಗುವಾಗ ತುಂಬಾ ಹಣ ತೆಗೆದುಕೊಂಡು ಹೋಗುವ ಅವಶ್ಯಕತೆ ಇರುವುದಿಲ್ಲ ಎಂದರೆ ಸಾಕ್ಷಿಯು ತನ್ನ ಸ್ನೇಹಿತರಿಗೆ ಹಣ ಕೊಡುವುದಿತ್ತು ಆದ್ದರಿಂದ ತೆಗೆದುಕೊಂಡು ಹೋಗಿದ್ದೆ ಆದರೆ ಆತ ಆ ದಿವಸ ಬಂದಿರಲಿಲ್ಲ ಎಂದು ಹೇಳುತ್ತಾರೆ. ನಾನು ಹೇಳಿದಂತೆ ಘಟನೆಯಾದ ದಿವಸ 5 ಸಾವಿರ ರೂಪಾಯಿ ಹಣ ನನ್ನ ಬಳಿ ಇರಲಿಲ್ಲ ಎಂದರೆ ಸರಿಯಲ್ಲ.

ನಮ್ಮ ಮನೆಯಿಂದ ಫ್ಯಾಕ್ಟರಿ ಹತ್ತಿರ ಹೋಗಲು ನೇರ ಬಸ್ಸಿನ ವ್ಯವಸ್ಥೆ ಇದೆ. ನನ್ನ ಜೊತೆ ನಮ್ಮ ಫ್ಯಾಕ್ಟರಿಯಲ್ಲಿ ಕೆಲಸ ಮಾಡುವ ಕೆಲವರು ಅಂದರೆ ಸುಮಾರು 12 ರಿಂದ 13 ಜನ ಬರುತ್ತಾರೆ. ನಮ್ಮ ಫ್ಯಾಕರಿಯಲ್ಲಿ ಕೆಲಸದ ಶಿಫ್ಟ್ ವ್ಯವಸ್ಥೆ ಇದೆ. ನಮ್ಮ ಫ್ಯಾಕ್ಟರಿಯವರು ಕೆಲಸಗಾರರು ಒಂದು ವರ್ಷದಲ್ಲಿ ಅವಕಾಶ ಸಿಕ್ಕಾಗಲೆಲ್ಲಾ ಕಂಪನಿ ನಾಟಕ ಮಾಡಿಸುತ್ತಾರೆ. ಘಟನೆಯ ದಿವಸ ರಾತ್ರಿ ಕಂಪನಿ ನಾಟಕಕ್ಕೆ ನಮ್ಮ ಕಂಪನಿಯ ಕೆಲಸಗಾರರು ಹಾಗೂ ಸಾರ್ವಜನಿಕರು ಒಟ್ಟು 1000 ಜನ ಸೇರಿದ್ದರು. ನಾಟಕ ರಾತ್ರಿ 8 ಗಂಟೆಗೆ ಪ್ರಾರಂಭ ಆಗಿತ್ತು. ಆ ದಿವಸ ನಾಟಕ ಇದುದರಿಂದ ಕಂಪನಿಯವರು ಪರಿಮೀಶನ್ ಕೊಟ್ಟಿದ್ದರಿಂದ ರಾತ್ರಿ 8 ಗಂಟೆಗೆ ಕೆಲಸ ಸಮಯ ಮುಕ್ತಾಯ ಆಗಿತ್ತು. ನಾಟಕ ಎಷ್ಟು ಗಂಟೆಗೆ ಮುಕ್ತಾಯ ಆಗುತ್ತದೆ ಎಂದು ನನಗೆ ಅಂದಾಜು ಇತ್ತು. ನಾಟಕದಲ್ಲಿ ಪಾತ್ರ ಮಾಡಿದವರಲ್ಲಿ ಕೆಲವರು ನಮ್ಮ

ಕಂಪನಿಯ ನೌಕರರಾಗಿದ್ದರು. ನಾಟಕ ಮಾಡಿಸುವಾಗ ಪ್ಯಾಂಪ್ಲೆಟ್ ಪ್ರಿಂಟ್ ಮಾಡಿ ಹಂಚುತ್ತಾರೆ. ಘಟನೆಯ ದಿವಸ ರಾತ್ರಿ ಮಾಡಿದ ನಾಟಕದ ಸಂಬಂಧ ಪ್ಯಾಂಪ್ಲೆಟ್ ಮಾಡಿದ್ದರು ಆದರೆ ಕಂಪನಿಯ ಕೆಲಸಗಾರರೊಬ್ಬರು ಮೃತರಾದ ಕಾರಣ ಆ ನಾಟಕವನ್ನು ಮುಂದೂಡಿದ್ದು ಘಟನೆಯ ದಿವಸ ರಾತ್ರಿ ಮಾಡಿದ್ದರು. ಸದರಿ ಪ್ಯಾಂಪ್ಲೆಟ್‌ನ್ನು ನಾನು ಪೋಲೀಸರಿಗೆ ಕೊಟ್ಟಿಲ್ಲ. ನಾನು ಹೇಳುವಂತೆ ಆ ರೀತಿ ಯಾವುದೇ ಕಂಪನಿ ನಾಟಕ ಇರಲಿಲ್ಲ ಎಂದರೆ ಸರಿಯಲ್ಲ.

ನಿಪಿ 2 ಸ್ಥಳ ಮಹಜರ್ ಮಾಡುವಾಗ ನನ್ನ ಸ್ನೇಹಿತರಾದ ಸಂತೋಷ್ ಮತ್ತು ರಘು ಎನ್ನುವವರು ಇದ್ದರು. ಮಹಜರ್ ಮಾಡಿದ ಸ್ಥಳದ ಚಕ್ಕುಬಂದಿ ನನಗೆ ಹೇಳಲಾಗುವುದಿಲ್ಲ. ಪೋಲೀಸರು ನನ್ನ ಸಮಕ್ಷಮದಲ್ಲಿ ಯಾವುದೇ ಮಹಜರ್ ಮಾಡಿಲ್ಲ ಖಾಲಿ ಪೇಪರ್‌ಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

2ನೇ ಆರೋಪಿ ಕೃಷ್ಣನನ್ನು ಕಳೆದ ಬಾರಿ ನ್ಯಾಯಾಲಯದಲ್ಲಿ ಪ್ರಥಮ ಬಾರಿ ನೋಡಿದ್ದೆ ಅದಕ್ಕೂ ಮೊದಲೂ ನೋಡಿರಲಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ 5 ಸಾವಿರ ಹಣ ಮತ್ತು ಎರಡು ಎ ಟಿ ಎಂ ಕಾರ್ಡ್‌ನ್ನು ಘಟನೆಯ ದಿವಸ ತೆಗೆದುಕೊಂಡು ಹೋಗಿರಲ್ಲಿಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಘಟನೆ ದಿವಸ ರಾತ್ರಿ ಯಾವುದೇ ವಾಹನದಲ್ಲಿ ಪ್ರಯಾಣ ಮಾಡಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಸ್ನೇಹಿತನಿಗೆ ಕೊಡಲು ಯಾವುದೇ ಹಣ ತೆಗೆದುಕೊಂಡು ಬಂದಿರಲಿಲ್ಲ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣೆಯ ಪುಟ 7 ರಲ್ಲಿ ನಾನು ಗುರುತಿಸಿದ ಮೂರು ಆರೋಪಿಗಳು ನನ್ನಿಂದ ಎ ಟಿ ಎಂ ಕಾರ್ಡ್ ಕಿತ್ತುಕೊಂಡಾಗ ಅಲ್ಲಿಗೆ ಬಜಾಜ್ ಸ್ಕೂಟರ್‌ನಲ್ಲಿ ಬಂದ ಇಬ್ಬರಿಗೆ ಎಷ್ಟು ಹಣ ತೆಗೆದುಕೊಂಡಿದ್ದೇವೆ ಎಂದು ಹೇಳಬೇಡ ಎಂದು ನನಗೆ ಹೆದರಿಸಿದರು ಎಂದು ಪೋಲೀಸರ ಮುಂದೆ ಹೇಳಿಕೆ ಕೊಡುವಾಗ ಹೇಳಲಿಲ್ಲ ಎಂದರೆ ಸರಿ. ಪೋಲೀಸ್ ಠಾಣೆಗೆ ನನ್ನನ್ನು ಕರೆಸಿ ಆರೋಪಿಗಳನ್ನು ತೋರಿಸಿರಲಿಲ್ಲ ಎಂದರೆ ಸರಿಯಲ್ಲ. ಪೋಲೀಸರಿಗೆ ಸುಳ್ಳು ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಪೋಲೀಸರು ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}

ಓ ಹೇ ಸಾ ಸ ಸಹಿ ಮಾಡಿದ್ದಾರೆ.

1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

**ದಂ.ಪ್ರ.ಸಂ. ಕಲಂ 299 ಸಿ.ಆರ್.ಪಿ.ಸಿ. ಅಡಿಯಲ್ಲಿ ಸಾಕ್ಷಿಯ ಪ್ರಮಾಣ ಪೂರ್ವಕ ಹೇಳಿಕೆಃ**

**ಮುಖ್ಯ ವಿಚಾರಣೆ –ಸರ್ಕಾರಿ ಅಭಿಯೋಜಕರಿಂದ**

**(ಆರೋಪಿ ಪರ ವಕೀಲರು ದಂ.ಪ್ರ.ಸಂ. ಕಲಂ 311 ರ ಅಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿ ಸಾಕ್ಷಿಯ ಪಾಟೀ-ಸವಾಲಿಗೆ ಅವಕಾಶ ನೀಡಲಾಗಿದೆ)**

**ದಿನಾಂಕ 28-10-2017ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ –ಸರ್ಕಾರಿ ಅಭಿಯೋಜಕರಿಂದ**

**ಪಾಟೀ-ಸವಾಲುಃ**

**(** ಈ ಹಂತದಲ್ಲಿ ಸಾಕ್ಷಿಯನ್ನು ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಅನುಮತಿ ನೀಡಲಾಯಿತು.**)**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರವರಿಂದಃ**